ಶ್ರೀ ಎಸ್.ಕೆ. ಕಾಂತಾ (ಕಾರ್ಮಿಕ ಸಚಿವರು),—

ಅ) ಡೆಕ್ಕನ್ ಹೆರಾಲ್ಡ್ ಸಂಸ್ಥೆಯಲ್ಲಿನ ವಿವಾದವು ದಿನಾಂಕ ೧೯-೧-೧೯೮೮ ರಂದು ಕಾರ್ಮಿಕ ಆಯುಕ್ತರವರ ಮುಂದೆ ನಡೆದ ಸಂಧಾನದ ಫಲವಾಗಿ ಒಂದು ಒಪ್ಪಂದಕ್ಕೆ ಸಹಿಯಾಗಿ ದಿನಾಂಕ ೨೦-೧-೧೯೮೮ ರಿಂದ ಮುಷ್ಕರವು ತೆರವಾಗಿದೆ.

ಆ) ಇಂಡಿಯನ್ ಟೊಬ್ಯಾಕೋ ಕಂಪೆನಿಯಲ್ಲಿ ಮುಷ್ಕರದ ಬಗ್ಗೆ ಅನೇಕ ಸಂಧಾನ ಪ್ರಯತ್ನಗಳು ನೆಡೆದು ವಿಫಲವಾಗಿ ಕಾರ್ಮಿಕ ಹಾಗೂ ಆಡಳಿತವರ್ಗದವರ ಬೇಡಿಕೆಗಳನ್ನು ನ್ಯಾಯಪಂಚಾಯತಿಗೆ ಒಪ್ಪಿಸಲಾಗಿದೆ.

ತಕಾವಿ ಸಾಲದ ವಿವರ

೪೧೯. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೦ ಮಾರ್ಚಿ ೩೧ ರಂದು ಮತ್ತು ೧೯೮೩ ಮಾರ್ಚಿ ೩೧ಕ್ಕೆ ರೈತರಿಂದ ಸರ್ಕಾರಕ್ಕೆ ಬರ ಬೇಕಾದ ತಕಾವಿ ಸಾಲದ ಒಟ್ಟು ಪೊಬಲಗು.

ಆ) ೧೯೮೭ ಡಿಸೆಂಬರ್ ೩೧ ರಂದು ಬಾಕಿ ಉಳಿದಿರುವ ತಕಾವಿ ಸಾಲದ ಪೊಬಲಗು,

ಇ) ವಸೂಲಿ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ಅ) ೧೯೮೦ ಮಾರ್ಚಿ ೩೧ ಕ್ಕೆ ರೂ. ೮,೬೮,೫೬,೭೮೬.೫೧

೧೯೮೩ ಮಾರ್ಚಿ ೩೧ಕ್ಕೆ ರೂ.೭,೪೮,೧೮,೯೨೦.೫೪

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯ ಸಮಗ್ರ ಬಾಲವಿಕಾಸ ಯೋಜನೆ

೧೦೦೬. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಸಮಗ್ರ ಬಾಲವಿಕಾಸ ಯೋಜನೆ(ಐಸಿಡಿಎಸ್)ಗಳ ಸಂಖ್ಯೆ ಎಷ್ಟು ?

ಆ) ಸಮಗ್ರ ಬಾಲವಿಕಾಸ ಯೋಜನೆಯಲ್ಲಿ ಮಡಿಕೇರಿ ತಾಲ್ಲೂಕು ಸೇರ್ಪಡೆಯಾಗದಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಈ ಯೋಜನೆಯಲ್ಲಿ ಕೇಂದ್ರ ಹಾಗೂ ರಾಜ್ಯ ಪಲಯೆಗಳಿಗೆ ಪಡೆದಿರುವ ಒಟ್ಟು ಅನುದಾನ (೧೯೮೫ರ ನಂತರ)

ಈ) ೧೯೮೫ ರಿಂದ ೮೭ರವರೆಗೆ ಈ ಯೋಜನೆಗೆ ಮಂಜೂರು ಮಾಡಲ್ಪಟ್ಟ ಅನುದಾನದಲ್ಲಿನ ಹಣವೇನಾದರೂ ನಿಂತು ಹೋಗಿದೆಯೆ ? (ಲ್ಯಾಪ್ಸ್) ಅಥವಾ ಬೇರೆ ಯೋಜನೆಗೆ ವರ್ಗಾಂತರ ಮಾಡಲಾಗಿದೆಯೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು),—

ಅ) ಎರಡು.

ಸೋಮವಾರಪೇಟೆ-೧

ಪೊನ್ನಂಪೇಟೆ-೧